ಓ ಎಸ್ ನಂಃ 394/2022
ಪಿ.ಡಬ್ಲ್ಯೂ.1 (ರಾಜಶ್ರೀ)

ದಿನಾಂಕ: 19-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ. ಎಮ್.ಆರ್.ಬಿ. ಪ್ರತಿವಾದಿ ಯರ ಪರ ವಕೀಲರಿಂದಃ

ನಿಂಗವ್ವ ಭೀಮಪ್ಪ ನಾಯ್ಕು ನನ್ನ ತಾಯಿ ಎಂದರೆ ಸರಿ. ದಾವಾ ಆಸ್ತಿಯ ಉತಾರದಲ್ಲಿ ನನ್ನ ತಾಯಿ ಮತ್ತು ಪ್ರತಿವಾದಿ 1 ಮತ್ತು 2 ರವರ ಹೆಸರು ಜಂಟಿಯಾಗಿ ಇವೆ ಎಂದರೆ ಸರಿ. ನನ್ನ ತಾಯಿ ಜೀವಿತ ಇರುತ್ತಾರೆ. ನಾನು ಹಾಜರಪಡಿಸಿದ ನಿಪಿ-16 ರ ಪ್ರಕಾರ ನನ್ನ ತಾಯಿ ಭೀಮಾ ನಾಯ್ಕು ಇವರ ಮೇಲೆ ಪಾಲು ಕೋರಿ ಈ ದಾವೆಯಲ್ಲಿರುವ ದಾವಾ ಆಸ್ತಿಯ ಮೇಲೆಯೇ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯು ಓ.ಎಸ್.ನಂ.487/2012 ಎಂದರೆ ಸರಿ. ನನ್ನ ತಾಯಿ ಸದರಿ ದಾವೆಯಲ್ಲಿ ಭೀಮ ನಾಯ್ಕು ಇವರು ದಾವಾ ಆಸ್ತಿ ಮಾರಾಟ ಮಾಡಬಾರದು ಎಂದು ಅರ್ಜಿ ಹಾಕಿದ್ದರು ಎಂದರೆ ಸರಿ. ಅದೇ ರೀತಿ ನ್ಯಾಯಾಲಯದಿಂದ ದಾವಾ ಆಸ್ತಿ ಮಾರಾಟ ಮಾಡಬಾರದೆಂದು ಆದೇಶ ಸಹ ಆಗಿತ್ತು ಎಂದರೆ ಸರಿ. ನಾನು ಹಾಜರಪಡಿಸಿರುವ ನಿಪಿ-3 ರಿಂದ 5 ರಲ್ಲಿ ನ್ಯಾಯಾಲಯದ ಆದೇಶ ಕಂಡುಬರುತ್ತದೆ ಎಂದರೆ ಸರಿ.

2. ನನ್ನ ತಾಯಿ ಓ.ಎಸ್.ನಂ.487/2012 ರಲ್ಲಿ ಇರುವ ಆಸ್ತಿ ಸರ್ವೆ ನಂ.26/1 ರಲ್ಲಿ ಸರಿಯಾಗಿ ಪಾಲು ಕೊಡಬೇಕೆಂದು ಕೇಳಿದ್ದರು ಎಂದರೆ ಸರಿ. ದಾವಾ ಸರ್ವೆ ನಂ.26/1 ಹಿರಿಯರ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯು ನಮ್ಮ ಮೂಲ ಪುರುಷ ಬಾಳಪ್ಪ ಇವರ ಆಸ್ತಿ ಎಂದರೆ ಸರಿ. ನಮ್ಮ ಅಜ್ಜನಿಗೆ ನಿಂಗವ್ವ ಮತ್ತು ಚಿನ್ನವ್ವ ಎಂದು ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ. ನಿಂಗವ್ವ ಇವರಿಗೆ 5 ಜನ ಹೆಣ್ಣು ಮಕ್ಕಳು, ಅವರುಗಳು ಮಹಾನಂದಿ, ಜಯಶ್ರೀ, ನಾನು, ಸಾಂವಕ್ಕಾ ಮತ್ತು ಲಕ್ಷ್ಮೀ ಎಂದರೆ ಸರಿ.

3. ಚೆನ್ನಕ್ಕ ಇವರಿಗೆ ಮೃತ ಭೀಮನಾಯ್ಕು ಗಂಡ ಎಂದರೆ ಸರಿ. ಅವರುಗಳಿಗೆ ಪ್ರತಿವಾದಿ 1 ಮತ್ತು 2 ಮಕ್ಕಳು ಎಂದರೆ ಸರಿ. 2 ನೇ ಪ್ರತಿವಾದಿಗೆ 4 ಜನ ಮಕ್ಕಳು ಅವರುಗಳು ಸರಸ್ವತಿ, ಲಕ್ಷ್ಮೀ, ವಿಠ್ಠಲ ಹಾಗೂ ಶಾಸಪ್ಪ. 1 ನೇ ಪ್ರತಿವಾದಿಗೆ ಸರಸ್ವತಿ ಹೆಂಡತಿ ಹಾಗೂ ಸದರಿಯವರಿಗೆ ರಾಘವೇಂದ್ರ ಮತ್ತು ರವಿಚಂದ್ರ ಎಂದು ಇಬ್ಬರು ಮಕ್ಕಳು ಎಂದರೆ ಸರಿ.

4. ನಿಶಾನೆ ಪಿ-1 ರಲ್ಲಿ ತೋರಿಸಿರುವ ಆಸ್ತಿಯ ಪೂರ್ವಕ್ಕೆ ನಿಂಗವ್ವ ಗಂಡ ಭೀಮ ನಾಯ್ಕು ಮತ್ತು ಪಶ್ಚಿಮಕ್ಕೆ ಭೀಮನಾಯ್ಕು ಹುಚ್ಚಪ್ಪ ನಾಯ್ಕು ಇವರ ಜಮೀನುಗಳು ಬರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರ ಮಾಡಿಲ್ಲ. ನಿಪಿ-1 ನ್ನು ಬರೆಯುವಾಗ ಅದರಲ್ಲಿ ತೋರಿಸಿರುವ ಆಸ್ತಿಯ ಚಕ್ಕಬಂದಿಗೆ ಸಂಬಂಧಪಟ್ಟ ದಾಖಲೆಯನ್ನು ನಾನು ತೆಗೆದುಕೊಂಡು ಹೋಗಿರಲಿಲ್ಲ. ನಾನು ನಿಪಿ-1 ಆಗುವಾಗ ಚಕ್ಕಬಂದಿ ಪ್ರಮಾಣ ಪತ್ರವನ್ನು ತೆಗೆದುಕೊಂಡು ಹೋಗಿರಲಿಲ್ಲ.

5. ನಿಪಿ-1 ಆಗುವಾಗ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದ ಬಗ್ಗೆ ನಾನು ನೋಡಿರುತ್ತೇನೆ. ನ್ಯಾಯಾಲಯದ ತಡೆಯಾಜ್ಞೆ ಇದ್ದ ವಿಷಯವನ್ನು ನಿಪಿ-1 ನ್ನು ಬರೆದವರಿಗೆ ಮತ್ತು ಉಪ-ನೋಂದಣಾಧಿಕಾರಿಗಳಿಗೆ ತೋರಿಸಿರುತ್ತೇನೆ. ನನ್ನ ಚಿಕ್ಕಪ್ಪ ನ್ಯಾಯಾಲಯದ ತಡೆಯಾಜ್ಞೆ ತೆಗೆಸಿ ಕೊಡುತ್ತೇನೆ ನಂತರ ನೀವು ಖರೀದಿ ಪತ್ರ ಮಾಡಿಕೊಳ್ಳಿ ಎಂದು ನನಗೆ ಹೇಳಿದ್ದರು. ನಿಪಿ-1 ರಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ಇದ್ದ ಬಗ್ಗೆ ಬರೆದಿಲ್ಲ ಎಂದರೆ ಸರಿ.

6. ನಿಪಿ-2 ರಿಂದ 6 ರಲ್ಲಿ ಕಾಲಂ ನಂ.11 ರಲ್ಲಿ ರೂ.1,000/- ಸಾಲ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯಲ್ಲಿ ಸಾಲ ನಿಂಗವ್ವ ಮತ್ತು ಭೀಮನಾಯ್ಕು ಇವರ ಜಂಟಿ ಹೆಸರಿನಲ್ಲಿ ಕಂಡುಬರುತ್ತದೆ ಎಂದರೆ ಸರಿ.

ಮೃತ ಭೀಮನಾಯ್ಕು ಇವರ ಜಮೀನು ಮತ್ತು ಮನೆ ಮುಳುಗಡೆಯಾಗಿತ್ತು ಮನೆ ಕಟ್ಟಿಕೊಳ್ಳಲು ಹಣದ ಅಡಚಣೆ ಇತ್ತು ಅದಕ್ಕಾಗಿ ದಾವಾ ಆಸ್ತಿ ಮಾರಾಟ ಮಾಡಲು ತೆಗೆದಿದ್ದರು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಭೀಮನಾಯ್ಕು ಇವರಿಗೆ ಮನೆ ಕಟ್ಟುವ ಸಲುವಾಗಿ ಹಣದ ಅಡಚಣೆ ಇದ್ದುದ್ದರಿಂದ ಜಮೀನು ಮಾರಾಟ ಮಾಡುತ್ತಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಯಾವ ಕಾರಣಕ್ಕಾಗಿ ಜಮೀನು ಮಾರಾಟ ಮಾಡಲು ತೆಗೆಯಲಾಗಿದೆ ಎಂದು ಬರೆದಿಲ್ಲ. ನಿಪಿ-1 ಕ್ಕೆ ಹಿರಿಯರು ಯಾರು ಸಹಿ ಮಾಡಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ